

# ಅನನ್ಯತೆಯ ಅನ್ವೇಷಣೆಯಲ್ಲಿ ಅದಿತಿ ಸಾಗರ್

**ಮುಕ್ತಕಂಠದ ಗಾಯನಕ್ಕೆ ಶಹಬ್ಬಾಶ್‌ಗಿರಿ ಪಡೆದಿರುವ ಅದಿತಿ ಸಾಗರ್, ನಟನೆಯಲ್ಲೂ ಅನನ್ಯ ಪ್ರಯೋಗಗಳಿಗೆ ತೆರೆದುಕೊಳ್ಳುವುದಾಗಿ ಹೇಳಿದ್ದಾರೆ. ಹೊಸತನಕ್ಕೆ ಸದಾ ತುಡಿಯುವ ಅವರು ಚಿತ್ರರಂಗದಲ್ಲೂ ಅನನ್ಯತೆಯ ಹುಡುಕಾಟದಲ್ಲಿದ್ದಾರೆ.**

**■ ಸುಮಲತಾ ಎನ್‌**

‘ಸುಮ್ಮನೆ ಕುಳಿತು ಬೆಂಕಿಯನ್ನೇ ದಿಟ್ಟಿಸು. ಈ ಪಾತ್ರದ ಬಗ್ಗೆ ಇದಕ್ಕಿಂತ ಹೆಚ್ಚು ಹೇಳಲ್ಲ’ – ಕನಕ ಪಾತ್ರದ ಕುರಿತು ನಿರ್ದೇಶಕ ಹರ್ಷ ಅವರು ಇಷ್ಟು ಹೇಳಿದ್ದರು. ಹೆಚ್ಚು ಸಂಭಾಷಣೆಯಿಲ್ಲದ, ಕಣ್ಣು, ಕ್ರಿಯೆಯಷ್ಟೇ ಮಾತಾಡಬೇಕಾದ ಪಾತ್ರವದು. ಆ ಪಾತ್ರದೊಳಗಿನ ಕಿಚ್ಚು, ಮೌನವೇ ನನಗೆ ಹೆಚ್ಚು ಆಸಕ್ತಿಕರ ಎನಿಸಿತು... ಇದು ‘ವೇದ’ ಸಿನಿಮಾದಲ್ಲಿ ಕನಕ ಆಗಿ ಕಾಣಿಸಿಕೊಂಡಿರುವ ಅದಿತಿ ಸಾಗರ್, ಸಿನಿಲೋಕದ ತಮ್ಮ ಚೊಚ್ಚಿಲ ಅನುಭವವನ್ನು ಹಂಚಿಕೊಂಡ ಬಗೆ.

‘ವೇದ’ ಸಿನಿಮಾದಲ್ಲಿ ಮೊದಲ ಬಾರಿಗೆ ಬಣ್ಣ ಹಚ್ಚಿರುವ ಅದಿತಿ ಸಾಗರ್, ಕನಕ ಪಾತ್ರದ ಮೂಲಕ ಕನ್ನಡ ಚಿತ್ರರಂಗದಲ್ಲಿ ಭರವಸೆಯ ಕಲಾವಿದೆಯಾಗುವ ಸುಳಿವು ನೀಡಿದ್ದಾರೆ. ಮುಕ್ತಕಂಠದ ಈ ಗಾಯಕಿ, ನಟನೆಯಲ್ಲೂ ಹಲವು ಪ್ರಯೋಗ, ಹೊಸತನಗಳಿಗೆ ತೆರೆದುಕೊಳ್ಳುವುದಾಗಿ ಹೇಳುತ್ತಾರೆ.

ನಟ ಅರುಣ್ ಸಾಗರ್ ಮಗಳು ಅದಿತಿ ಸಾಗರ್, ಸಿನಿಮಾರಂಗಕ್ಕೆ ಹೊಸಬರೇನಲ್ಲ. ‘ರ‍್ಯಾಂಬೊ 2’ ಸಿನಿಮಾದ ‘ದಮ್ಮರೊ ದಮ್’ ಹಾಡಿನ ಮೂಲಕ 14ನೇ ವಯಸ್ಸಿಗೇ ಹಿನ್ನೆಲೆ ಗಾಯಕಿಯಾಗಿ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದವರು. ‘ಫ್ರೆಂಚ್ ಬಿರಿಯಾನಿ’ ಸಿನಿಮಾದ ಬೆಂಗಳೂರು ಹಾಡಿಗೆ ಅನನ್ಯತೆ ದಕ್ಕಿದ್ದು